Manipal Academy of Higher Education
Impressions@MAHE

Manipal College of Health Professions, Manipal Theses and Dissertations

MAHE Student Work

Spring 5-2021

# Care for the caregiver. Role of occupational therapy in parent mental health.

Hasti Ashutosh Hasti Divecha

Follow this and additional works at: https://impressions.manipal.edu/mcph

Part of the Medicine and Health Sciences Commons



ಅರಿವೇ ಗುರು

# ಆರೈಕೆದಾರರ ಯೋಗಕ್ಷೇಮ ಯಾರು ನೋಡಿಕೊಳ್ಳುತ್ತಾರೆ?



## ಹೆತ್ತವರ ಮಾನಸಿಕ ಆರೋಗ್ಯದಲ್ಲಿ ಆಕ್ಯುಪೇಶನಲ್ ಥೆರಪಿಯ ಪಾತ್ರ

**ಹಸ್ತಿ ದಿವೇಚಾ**
ಸ್ನಾತಕೋತ್ತರ ವಿದ್ಯಾರ್ಥಿನಿ,
ಆಕ್ಯುಪೇಶನಲ್ ಥೆರಪಿ ವಿಭಾಗ

**ಕೌಶಿಕ್ ಸಾಹು**
ಅಸಿಸ್ಟೆಂಟ್ ಪ್ರೊಫೆಸರ್- ಹಿರಿಯ ಶ್ರೇಣಿ,
ಆಕ್ಯುಪೇಶನಲ್ ಥೆರಪಿ ವಿಭಾಗ,
ಎಂಸಿಎಚ್‌ಪಿ, ಮಾಹೆ, ಮಣಿಪಾಲ

ಪ್ರತೀ ವರ್ಷವೂ ಎಪ್ರಿಲ್ 2ರಂದು ಆಟಿಸಂ ಅರಿವು ದಿನವನ್ನು ಆಚರಿಸಲಾಗುತ್ತದೆ. ಆಟಿಸಂ ಪೀಡಿತ ಮಕ್ಕಳ ಬಗ್ಗೆ ಅರಿವು, ಅವರ ಸಾಮಾಜಿಕ ಸ್ವೀಕೃತಿಗೆ ವಿವಿಧ ಕಾರ್ಯಕ್ರಮಗಳು, ಅಭಿಯಾನಗಳು, ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಆಟಿಸಂ ಪೀಡಿತರು ಸಮಾಜದಲ್ಲಿ ಎಲ್ಲರಂತೆ ಬದುಕುವಂತಹ ಸನ್ನಿವೇಶವನ್ನು ಸೃಷ್ಟಿಸುವುದಕ್ಕಾಗಿ ಈ ದಿನವನ್ನು ಉಪಯೋಗಿಸಲಾಗುತ್ತದೆ. ಇದು ಇಂತಹ ಮಕ್ಕಳ ಲಾಲನೆ ಪಾಲನೆಯಲ್ಲಿ ಒಳಗೊಳ್ಳುವ ಜನರತ್ತ ನಾವು ಗಮನ ಹರಿಸುವಂತೆ ಮಾಡುತ್ತದೆ, ಇಂತಹ ಮಕ್ಕಳ ಹೆತ್ತವರು ಆಟಿಸಂಪೀಡಿತ ಮಗುವನ್ನು ಹೊಂದಿರುವುದರ ಬಗ್ಗೆ ಸಮಾಜದಲ್ಲಿ ಎದುರಿಸುವ ಪರಿಸ್ಥಿತಿಯ ಬಗ್ಗೆ, ಅವರ ಮಾನಸಿಕ ಆರೋಗ್ಯ, ದೈನಿಕ ಬದುಕಿನ ಬಗ್ಗೆ ಅವಲೋಕಿಸುವಂತೆ ಮಾಡುತ್ತದೆ.



ಭಾರತದಲ್ಲಿ 2ರಿಂದ 9 ವರ್ಷ ವಯೋಮಾನದ ಪ್ರತೀ 65 ಮಕ್ಕಳಲ್ಲಿ ಒಂದು ಮಗು ಆಟಿಸಂ ಹೊಂದಿರುತ್ತದೆ. ಇದೊಂದು ಬೆಳವಣಿಗೆಗೆ ಸಂಬಂಧಿಸಿದ ಸಮಸ್ಯೆಯಾಗಿದ್ದು, ಪರಿಣಾಮಕಾರಿ ಸಂವಹನಕ್ಕೆ ಅಡೆತಡೆಗಳನ್ನು ಒಡ್ಡುತ್ತದೆ, ಆಲೋಚನೆ, ಗ್ರಹಿಕೆ ಮತ್ತು ವರ್ತನೆಗಳ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ. ಮಕ್ಕಳಲ್ಲಿ ಎರಡು ವರ್ಷಗಳಷ್ಟು ಸಣ್ಣ ವಯಸ್ಸಿನಲ್ಲಿಯೇ ಈ ಸಮಸ್ಯೆಯನ್ನು ಗುರುತಿಸಿ ಪತ್ತೆಹಚ್ಚಬಹುದಾಗಿದೆ. ಅದು ಪತ್ತೆಯಾದ ಬಳಿಕ ವಿವಿಧ ಬಗೆಯ ತೆರಪಿಗಳು, ಚಿಕಿತ್ಸೆಗಳು ಮತ್ತು ಇತರ ವೃತ್ತಿಪರ ಒಳಗೊಳ್ಳುವಿಕೆಯ ಮೂಲಕ ಆಟಿಸಂ ಹೊಂದಿರುವ ಮಗು ಸ್ವತಂತ್ರ ಮತ್ತು ಕಾರ್ಯನಿರ್ವಹಣೆ ಮಾಡಬಲ್ಲ ವಯಸ್ಕನಾಗಿ ಸಮಾಜವನ್ನು ಪ್ರವೇಶಿಸುವುದನ್ನು ಸಾಧ್ಯ ಮಾಡಲಾಗುತ್ತದೆ. ಜಾಗತಿಕವಾಗಿ ಆಟಿಸಂ ಬಗ್ಗೆ ವಿವಿಧ ನಮೂನೆಯ ಮೂಢನಂಬಿಕೆಗಳು ಚಾಲ್ತಿಯಲ್ಲಿದ್ದು, ಇದು ಆಟಿಸಂ ಹೊಂದಿರುವ ಮಕ್ಕಳು ಮತ್ತು ಅವರ ಹೆತ್ತವರನ್ನು ನೋವು, ಚಿಂತೆಗೀಡು ಮಾಡುತ್ತದೆ.



ಆಟಿಸಂ ಹೊಂದಿರುವ ಮಕ್ಕಳ ಹೆತ್ತವರ ಪ್ರಯತ್ನಗಳು ಅಪೂರ್ವವಾದವುಗಳು, ಈ ಬಗ್ಗೆ ಎರಡು ಮಾತಿಲ್ಲ. ಅವರ ಬದುಕು ಹೆಚ್ಚುಕಡಿಮೆ ಅವರ ಆಟಿಸಂ ಹೊಂದಿರುವ ಮಕ್ಕಳ ಸುತ್ತಲೇ ಸುತ್ತುತ್ತಿರುತ್ತದೆ. ಅವರ ದೈನಿಕ ಜೀವನವು ಆಟಿಸಂ ಪೀಡಿತ ಮಗುವಿನ ಚಿಕಿತ್ಸೆಯ ವೇಳಾಪಟ್ಟಿ, ಮನೆಯಲ್ಲಿ ಮಾಡಬೇಕಾದ ಚಟುವಟಿಕೆಗಳು, ಅವರು ಪೂರ್ಣ ಸ್ವಾವಲಂಬನೆ ಗಳಿಸುವವರೆಗೆ ಅವರ ದೈನಿಕ ಚಟುವಟಿಕೆಗಳಾದ ಸ್ನಾನ ಮಾಡುವುದು, ಊಟ ಮಾಡುವುದು, ಬಟ್ಟೆ ಬರೆ ಧರಿಸುವುದು ಮತ್ತಿತರ ಚಟುವಟಿಕೆಗಳಲ್ಲಿ ಸಹಾಯ ಮಾಡುವುದು, ಈ ನಡುವೆ ಸ್ವಂತ ಉದ್ಯೋಗ ಅಥವಾ ಮನೆಗೆಲಸಗಳನ್ನು ನಿಭಾಯಿಸುವುದು, ಇನ್ನೊಂದು ಮಗು ಇದ್ದರೆ ಅದರ ಲಾಲನೆ ಪಾಲನೆ – ಹೀಗೆ ನಿಬಿಡವಾಗಿರುತ್ತದೆ.

ಮುಂದಿನ ವಾರಕ್ಕೆ

**ಈ ಲೇಖನದಲ್ಲಿರುವ ವಿಚಾರಗಳ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿ:**
**ಮುಖ್ಯಸ್ಥರು,**
ಆಕ್ಯುಪೇಶನಲ್ ಥೆರಪಿ ವಿಭಾಗ, ಕೆಎಂಸಿ ಆಸ್ಪತ್ರೆ, ಮಾಹೆ, ಮಣಿಪಾಲ